ಸದನವು ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು

ವಂದೇ ಮಾತರಂ ಗೀತೆಯೊಂದಿಗೆ ಸದನವು ಪ್ರಾರಂಭಗೊಂಡಿತು

ಅಧ್ಯಕ್ಷರು:– ಮಾನ್ಯ ಎಲ್ಲಾ ಸದಸ್ಯರಿಗೂ ಸಂತೋಷದಿಂದ ಸ್ವಾಗತಿಸುತ್ತೇನೆ. ಈಗ ಸಂತಾಪ ಸೂಚನೆಯನ್ನು ಮಂಡಿಸುತ್ತೇನೆ.

1. ಸಂತಾಪ ಸೂಚನೆ

ವಿಧಾನಸಭೆಯ ಮಾಜಿ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವರಾದ ವಿ.ಎಸ್. ಕೌಜಲಗಿ, ಮಾಜಿ ಸಚಿವರುಗಳಾದ ಜಿ.ಹೆಚ್. ಅಶ್ವಥ್‌ರೆಡ್ಡಿ, ಡಾ॥ ಹೆಚ್.ಆರ್. ರಾಜು, ಎಸ್.ಬಿ. ನಾಗರಾಳ, ಮಾಜಿ ವಿಧಾನಸಭಾ ಸದಸ್ಯರುಗಳಾದ ಎಂ.ಎಸ್. ಕಮಲ, ಕೆ. ಸಿದ್ದಯ್ಯ, ಬಿ.ಆರ್. ನೀಲಕಂಠಪ್ಪ, ಅಣ್ಣಾರಾವ್ ಭೀಮರಾವ್ ಪಾಟೀಲ್, ಜಿ. ಶಿವಣ್ಣ ಹಾಗೂ ಕನ್ನಡದ ಸಾರಸ್ವತ ಲೋಕದ ದಿಗ್ಗಜ ಡಾ॥ ಯು.ಆರ್. ಅನಂತಮೂರ್ತಿ ಮತ್ತು ವಿಶ್ವವಿಖ್ಯಾತ ಯೋಗ ಗುರು ಬಿ.ಕೆ.ಎಸ್. ಅಯ್ಯಂಗಾರ್ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ವೀರಣ್ಣ ಶಿವಲಿಂಗಪ್ಪ ಕೌಜಲಗಿ

ವೀರಣ್ಣ ಶಿವಲಿಂಗಪ್ಪ ಕೌಜಲಗಿ ಅವರು 21ನೇ ಸೆಪ್ಟೆಂಬರ್ 1938ರಂದು ಬೈಲಹೊಂಗಲ ತಾಲ್ಲೂಕಿನ ದೇಶನೂರಿನಲ್ಲಿ ಜನಿಸಿದ್ದು, ಬಿ.ಇ. ಹಾಗೂ ಎಫ್.ಐ.ಇ. ಪದವೀಧರರಾಗಿದ್ದ ಅವರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರು.

1962ರಲ್ಲಿ ಭಾರತೀಯ ನೌಕಾಪಡೆ ಸೇವೆಗೆ ಸೇರಿದ ದಿವಂಗತರು ಪುಣೆಯಲ್ಲಿ ಸಬ್ ಲೆಫ್ಟಿನೆಂಟ್ ಆಗಿ ಸೇವೆ ಸಲ್ಲಿಸಿ, 1965ರಲ್ಲಿ ನಡೆದ ಇಂಡೋ–ಪಾಕ್ ಯುದ್ಧದಲ್ಲಿ ಭಾಗವಹಿಸಿದ್ದು, ಪುಣೆಯಲ್ಲಿರುವ ಭಾರತ್ ಫೋರ್ಜ್ ಲಿಮಿಟೆಡ್‌ನಲ್ಲಿಯೂ ಕಾರ್ಯನಿರ್ವಹಿಸಿದ್ದ ದಿವಂಗತರು ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕರಾಗಿ ಹಾಗೂ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ದಿವಂಗತರು 5, 6, 7, 8, 9, 10 ಹಾಗೂ 11ನೇ ವಿಧಾನ ಸಭೆಗೆ ಅರಭಾವಿ ಕ್ಷೇತ್ರದಿಂದ 06 ಬಾರಿ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ. ಹಿರಿಯ ರಾಜಕೀಯ ಮುತ್ಸದ್ದಿಯಾಗಿದ್ದ ದಿವಂಗತರು 9ನೇ ವಿಧಾನ ಸಭೆಯಲ್ಲಿ ವಿಧಾನಸಭೆಯ ಸಭಾದ್ಯಕ್ಷರಾಗಿ, ದೇವರಾಜ ಅರಸುರವರ ಸಚಿವ ಸಂಪುಟದಲ್ಲಿ ಸಣ್ಣ ಕೈಗಾರಿಕೆ, ರೇಷ್ಮೆ, ಯುವಜನ ಸೇವೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳ ಸಚಿವರಾಗಿ ಹಾಗೂ ಎಸ್.ಎಂ. ಕೃಷ್ಣರವರ ಸಚಿವ ಸಂಪುಟದಲ್ಲಿ ಕೃಷಿ ಮತ್ತು ತೋಟಗಾರಿಕೆ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ವೀರಣ್ಣ ಶಿವಲಿಂಗಪ್ಪ ಕೌಜಲಗಿ ಅವರು ದಿನಾಂಕ 29.10.2014ರಂದು ನಿಧನ ಹೊಂದಿರುತ್ತಾರೆ.

2. ಜಿ.ಹೆಚ್. ಅಶ್ವಥ್‌ರೆಡ್ಡಿ

ಜಿ.ಹೆಚ್. ಅಶ್ವಥ್‌ರೆಡ್ಡಿಯವರು 6ನೇ ಮಾರ್ಚ್, 1933 ರಂದು ಚಿತ್ರದುರ್ಗ ಜಿಲ್ಲೆಯ ಕಡಬನಕಟ್ಟೆ ಗ್ರಾಮದಲ್ಲಿ ಜನಿಸಿದ್ದು, ಬಿ.ಎಸ್.ಸಿ.(ಆನರ್ಸ್) ಪದವೀಧರರಾಗಿದ್ದ ದಿವಂಗತರು ಚಿತ್ರದುರ್ಗದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು. ವೃತ್ತಿಯಲ್ಲಿ ಕೃಷಿಕರು ಹಾಗೂ ಪ್ರವೃತ್ತಿಯಲ್ಲಿ ಕೈಗಾರಿಕೋದ್ಯಮಿಯಾಗಿದ್ದರು.

ಜಗಳೂರು ಕ್ಷೇತ್ರದಿಂದ 5, 6, 7, 8 ಮತ್ತು 9ನೇ ವಿಧಾನ ಸಭೆಗೆ ಸತತವಾಗಿ 05 ಬಾರಿ ಆಯ್ಕೆಯಾಗಿದ್ದ ದಿವಂಗತರು 11ನೇ ವಿಧಾನ ಸಭೆಗೆ ಇದೇ ಕ್ಷೇತ್ರದಿಂದ ಪುನರಾಯ್ಕೆಯಾಗಿ ಒಟ್ಟು 06 ಬಾರಿ ವಿಧಾನ ಸಭೆಯ ಸದಸ್ಯರಾಗಿರತ್ತಾರೆ. ಆರ್. ಗುಂಡೂರಾವ್‌ರವರ ಸಚಿವ ಸಂಪುಟದಲ್ಲಿ ಇಂಧನ ಖಾತೆ ಸಚಿವರಾಗಿ "ಭಾಗ್ಯಜ್ಯೋತಿ" ಎಂಬ ಯೋಜನೆಯನ್ನು ಜಾರಿಗೊಳಿಸಿದ

ದಿವಂಗತರು, ಎಸ್. ಬಂಗಾರಪ್ಪರವರ ಸಚಿವ ಸಂಪುಟದಲ್ಲಿಯೂ ಲೋಕೋಪಯೋಗಿ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಜಿ.ಹೆಚ್. ಅಶ್ವತ್ಥ್‌ರೆಡ್ಡಿ ಅವರು ದಿನಾಂಕ 03.08.2014ರಂದು ನಿಧನ ಹೊಂದಿರುತ್ತಾರೆ.

3. ಡಾ॥ ಹೆಚ್.ಆರ್. ರಾಜು

ಡಾ॥ ಹೆಚ್.ಆರ್. ರಾಜು ಅವರು 01ನೇ ಜುಲೈ, 1939ರಂದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಜನಿಸಿದ್ದು, ವೈದ್ಯಕೀಯ ಪದವೀಧರರು ಹಾಗೂ ಮಕ್ಕಳ ಆರೋಗ್ಯದಲ್ಲಿ ಡಿಪ್ಲೊಮೊ ಪಡೆದಿದ್ದ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ದಿವಂಗತರು ಹಿಂದುಳಿದ ಜನರ ಅಭಿವೃದ್ಧಿಗಾಗಿ ಸಾರ್ವಜನಿಕ ಆರೋಗ್ಯ ಮತ್ತು ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ.

ದಿವಂಗತರು 1983ರ ಉಪ ಚುನಾವಣೆಯಲ್ಲಿ 7ನೇ ವಿಧಾನ ಸಭೆಗೆ ಹಾಗೂ 1989ರಲ್ಲಿ 9ನೇ ವಿಧಾನ ಸಭೆಗೆ ತರೀಕೆರೆ ಕ್ಷೇತ್ರದಿಂದ ಚುನಾಯಿತರಾಗಿದ್ದು, 1989ರಲ್ಲಿ ವೀರೇಂದ್ರ ಪಾಟೀಲರವರ ಸಚಿವ ಸಂಪುಟದಲ್ಲಿ ಸಹಕಾರ ಸಚಿವರಾಗಿ ಹಾಗೂ 1992ರಲ್ಲಿ ಶ್ರೀ ವೀರಪ್ಪ ಮೊಯ್ಲಿ ರವರ ಮಂತ್ರಿ ಮಂಡಲದಲ್ಲಿ ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ಪರಿಸರ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಸಚಿವರಾಗಿದ್ದರು.

ಡಾ॥ ಹೆಚ್.ಆರ್. ರಾಜು ಅವರು ದಿನಾಂಕ 31.08.2014 ರಂದು ನಿಧನ ಹೊಂದಿರುತ್ತಾರೆ.

4. ಎಸ್.ಬಿ. ನಾಗರಾಳ

ಸಂಗಪ್ಪ ಬಾಳಪ್ಪ ನಾಗರಾಳ ಅವರು 1920ರಲ್ಲಿ ಜನಿಸಿದ್ದು, 1972ರಲ್ಲಿ 5ನೇ ವಿಧಾನ ಸಭೆಗೆ ಬಾಗಲಕೋಟೆ ಜಿಲ್ಲೆಯ ಹುನಗುಂದ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ರೇಷ್ಮೆ, ಸಣ್ಣ ನೀರಾವರಿ ಹಾಗೂ ಅರಣ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.

1977ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಎಸ್.ಬಿ. ನಾಗರಾಳ ಅವರು ದಿನಾಂಕ 15.10.2014 ರಂದು ನಿಧನ ಹೊಂದಿರುತ್ತಾರೆ.

5. ಎಂ.ಎಸ್. ಕಮಲ

ಎಂ.ಎಸ್. ಕಮಲ ಅವರು ಜೂನ್, 1928ರಲ್ಲಿ ಗೂಟಿಯಲ್ಲಿ ಜನಿಸಿದ್ದು, ಎಸ್.ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿದ್ದ ಅವರು ವೃತ್ತಿಯಲ್ಲಿ ಗುತ್ತಿಗೆದಾರರಾಗಿದ್ದು, ಮಹಿಳಾ ಸಮಾಜ ಕಾರ್ಯಕರ್ತೆಯಾಗಿ ಗುರುತಿಸಿಕೊಂಡಿದ್ದರು.

ದಿವಂಗತರು, 1962ರಲ್ಲಿ ಮೈಸೂರು ವಿಧಾನ ಸಭೆಗೆ ನಡೆದ 3ನೇ ಸಾರ್ವತ್ರಿಕ ಚನಾವಣೆಯಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷ (ಪಿ.ಎಸ್.ಪಿ) ದಿಂದ ಹೊಸಪೇಟೆ ಕ್ಷೇತ್ರದಿಂದ ಆಯ್ಕೆಯಾಗಿ ಮೊದಲ ಮಹಿಳಾ ಶಾಸಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಎಂ.ಎಸ್. ಕಮಲ ಅವರು ದಿನಾಂಕ 24.09.2014ರಂದ ನಿಧನ ಹೊಂದಿರುತ್ತಾರೆ.

6. ಕೆ. ಸಿದ್ದಯ್ಯ

ಕೆ. ಸಿದ್ದಯ್ಯ ಅವರು ದಿನಾಂಕ 20ನೇ ಜೂನ್, 1919 ರಂದು ಚಾಮರಾಜನಗರ ತಾಲ್ಲೂಕಿನ ಕುದೇರುವಿನಲ್ಲಿ ಜನಿಸಿದ್ದು, ಕಲಾ ಮತ್ತು ಕಾನೂನು ಪದವೀಧರರಾಗಿದ್ದ ಅವರು ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರಾಗಿದ್ದರು.

ದಿವಂಗತರು 1972 ಹಾಗೂ 1989ರಲ್ಲಿ ಎರಡು ಬಾರಿ ಸಂತೇಮಾರನಹಳ್ಳಿ ಮೀಸಲು ಕ್ಷೇತ್ರದಿಂದ ವಿಧಾನ ಸಭೆಗೆ ಚುನಾಯಿತರಾಗಿದ್ದರು. ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ

ಇವರು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಏಳಿಗೆಯಲ್ಲಿ ಆಸಕ್ತಿ ಹೊಂದಿದ್ದರು.

ಕೆ. ಸಿದ್ದಯ್ಯ ಅವರು ದಿನಾಂಕ 03.10.2014 ರಂದು ನಿಧನ ಹೊಂದಿರುತ್ತಾರೆ.

7. ಬಿ.ಆರ್. ನೀಲಕಂಠಪ್ಪ

ಬಿ.ಆರ್. ನೀಲಲಕಂಠಪ್ಪ ಅವರು ದಿನಾಂಕ 3ನೇ ಜುಲೈ, 1944ರಂದು ಚಿಕ್ಕಮಗಳೂರು ಜಿಲ್ಲೆಯ ಬೆಟ್ಟದಹಳ್ಳಿಯಲ್ಲಿ ಜನಿಸಿದ್ದು, ಬಿ.ಎ. ಪದವೀಧರರಾಗಿದ್ದ ಅವರು ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿ ನಾಯಕರಾಗಿದ್ದರು.

ದಿವಂಗತರು 1985ರಲ್ಲಿ ಪ್ರಥಮ ಬಾರಿಗೆ 8ನೇ ವಿಧಾನ ಸಭೆಗೆ ಆಯ್ಕೆಯಾಗಿ, 1999ರಲ್ಲಿ 11ನೇ ವಿಧಾನ ಸಭೆಗೆ ತರೀಕೆರೆ ವಿಧಾನ ಸಭಾ ಕ್ಷೇತ್ರದಿಂದ ಪುನರಾಯ್ಕೆಯಾಗಿದ್ದರು. ಚಿಕ್ಕಮಗಳೂರು ಜಿಲ್ಲೆಯ ರೈತ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ದಿವಂಗತರು ಹಲವಾರು ಸಂಘ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡು ಸಮಾಜ ಸೇವೆಯನ್ನು ಕೈಗೊಂಡಿದ್ದರು. ಬೆಟ್ಟದಹಳ್ಳಿಯಲ್ಲಿ ಶ್ರಿ ಜಯಪ್ರಕಾಶ್ ನಾರಾಯಣ್ ಪ್ರೌಢ ಶಾಲೆಯನ್ನು ಪ್ರಾರಂಭಿಸಿ, ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗಿದ್ದರು.

ಬಿ.ಆರ್. ನೀಲಕಂಠಪ್ಪ ಅವರು ದಿನಾಂಕ 04.10.2014ರಂದು ನಿಧನ ಹೊಂದಿರುತ್ತಾರೆ.

8. ಅಣ್ಣಾರಾವ್ ಭೀಮರಾವ್ ಪಾಟೀಲ

92 ವರ್ಷಗಳನ್ನು ಪೂರೈಸಿದ್ದ ಅಣ್ಣಾರಾವ್ ಭೀಮರಾವ್ ಪಾಟೀಲ ಅವರು ಎಸ್.ಎಸ್.ಎಲ್.ಸಿ.ವರೆಗೆ ವ್ಯಾಸಂಗ ಮಾಡಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಅಖಿಲ ಭಾರತ ಕೃಷಿಕ ಸಮಾಜ ಹಾಗೂ ಆಳಂದ ತಾಲ್ಲೂಕಿನ ಖಾದಿ ಗ್ರಾಮೋದ್ಯೋಗ ಮಂಡಳಿ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಕರ್ನಾಟಕ ಗೃಹ ಮಂಡಳಿ, ಹಾಗೂ ಹಲವಾರು ಸಂಘ ಸಂಸ್ಥೆಗಳ ಸದಸ್ಯರಾಗಿದ್ದ ದಿವಂಗತರು 1978ರಲ್ಲಿ ಆಳಂದ ಕ್ಷೇತ್ರದಿಂದ 6ನೇ ವಿಧಾನ ಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಸರಳತೆ ಮತ್ತು ಸಜ್ಜನಿಕೆಗೆ ಹೆಸರಾಗಿದ್ದ ಅವರು ನೀರಾವರಿ ಸೇರಿದಂತೆ ಆ ಭಾಗದ ರೈತರ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿದ್ದು, ಕೃಷಿ ಆಯೋಜಿತ ಕಾರ್ಯಕ್ರಮಗಳಲ್ಲಿ ಪ್ರಶಸ್ತಿ/ಗೌರವಗಳಿಗೆ ಪಾತ್ರರಾಗಿದ್ದರು.

ಅಣ್ಣಾರಾವ್ ಭೀಮರಾವ್ ಪಾಟೀಲ ಅವರು ದಿನಾಂಕ 20.10.2014ರಂದು ನಿಧನ ಹೊಂದಿರುತ್ತಾರೆ.

9. ಜಿ. ಶಿವಣ್ಣ

ಜಿ. ಶಿವಣ್ಣ ಅವರು 18ನೇ ಸೆಪ್ಟಂಬರ್, 1938 ರಂದು ರಾಣೆಬೆನ್ನೂರಿನಲ್ಲಿ ಜನಿಸಿದ್ದು, ಎಸ್.ಎಸ್.ಎಲ್.ಸಿ. ಯವರೆಗೆ ವ್ಯಾಸಂಗ ಮಾಡಿದ್ದ ಅವರು ವೃತ್ತಿಯಲ್ಲಿ ಕೃಷಿಕರು ಹಾಗೂ ವ್ಯಾಪಾರಸ್ಥರಾಗಿದ್ದರು.

ಶಿವಣ್ಣ ಅವರು ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ, ರಾಣೆಬೆನ್ನೂರು ನಗರಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ದಿವಂಗತರು ರಾಣೆಬೆನ್ನೂರು ಕ್ಷೇತ್ರದಿಂದ 12ನೇ ಹಾಗೂ 13ನೇ ವಿಧಾನಸಭೆಗೆ ಆಯ್ಕೆಯಾಗಿ, ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದರಲ್ಲದೆ ಸಮಾಜ ಸೇವಕರೂ ಆಗಿದ್ದರು.

ಜಿ. ಶಿವಣ್ಣ ಅವರು ದಿನಾಂಕ:01.12.2014 ರಂದು ನಿಧನ ಹೊಂದಿರುತ್ತಾರೆ.

10. ಡಾ॥ ಯು.ಆರ್. ಅನಂತಮೂರ್ತಿ

ಕನ್ನಡದ ಹಿರಿಯ ಸಾಹಿತಿ ಡಾ॥ ಉಡುಪಿ ರಾಜಗೋಪಾಲಚಾರ್ಯ ಅನಂತಮೂರ್ತಿ ಅವರು 21ನೇ ಡಿಸೆಂಬರ್ 1932ರಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದ್ದು, ಇಂಗ್ಲೀಷ್‌ನಲ್ಲಿ ಎಂ.ಎ. ಪದವಿಯನ್ನು ಹಾಗೂ 1966ರಲ್ಲಿ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯ ಕುರಿತು ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದರು.

ದಿವಂಗತರು ಮೈಸೂರು ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ವಿಭಾಗದಲ್ಲಿ ರೀಡರ್ ಆಗಿ, ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾಗಿ, ಗುಲ್ಬರ್ಗದ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ, ಜರ್ಮನಿಯ ಟ್ಯೂಬಿಂಗನ್ ವಿಶ್ವವಿದ್ಯಾಲಯದಲ್ಲಿ ಹಾಗೂ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು, 1993 ರಿಂದ 1998 ರವರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪದವಿಯನ್ನು ಹೊಂದಿದ್ದರು.

1994ರಲ್ಲಿ ಜ್ಞಾನಪೀಠ ಪುರಸ್ಕೃತರಾಗಿದ್ದ ಅವರು 1970ರಲ್ಲಿ 'ಸಂಸ್ಕಾರ' ಚಿತ್ರಕ್ಕಾಗಿ ಅತ್ಯುತ್ತಮ ಕಥಾ ಪ್ರಶಸ್ತಿಯನ್ನು ಹಾಗೂ 1998ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದಿದ್ದರು.

ನವ ಸಾಹಿತ್ಯ ಚಳುವಳಿಯ ಪಿತಾಮಹರಲ್ಲಿ ಒಬ್ಬರಾಗಿದ್ದ ಅವರು ಶೀಸಾಮಾನ.ನ ಹಿತ ಕಾಯುವಲಿ ವಿಶೇಷ ಕಳಕಳಿ ಹಾಗೂ ಅಪತಿಮ

ಮಾರಕವಾಗಿದ್ದ ಕಬ್ಬಿಣ ಅದಿರು ಕಾರ್ಖಾನೆಯನ್ನು ತೆರವು ಮಾಡಬೇಕೆಂದು ಜನಪರ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

ಕವಿ, ಕಥೆಗಾರ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದ ಅವರು ಹಲವು ಸಾಹಿತ್ಯ ಸೂತ್ರಗಳಿಗೆ ಉದಾಹರಣೆಯಾಗಿದ್ದರು. ದಿವಂಗತರು ನಾಡು ಕಂಡ ಅಪ್ರತಿಮ ಸಾಹಿತಿ, ಸರಳ, ಸಜ್ಜನ, ಹೃದಯವಂತರಾಗಿ ಎಲ್ಲರೊಂದಿಗೆ ಉತ್ತಮ ಒಡನಾಟ ಹೊಂದಿದ್ದ ಸಾರಸ್ವತ ಲೋಕದ ದಿಗ್ಗಜರಾಗಿದ್ದರು.

ಡಾ॥ ಯು.ಆರ್. ಅನಂತಮೂರ್ತಿ ಅವರು ದಿನಾಂಕ: 22.08.2014ರಂದು ನಿಧನ ಹೊಂದಿರುತ್ತಾರೆ.

11. ಬಿ.ಕೆ.ಎಸ್. ಅಯ್ಯಂಗಾರ್

ಬೆಳ್ಳೂರು ಕೃಷ್ಣಮಾಚಾರಿ ಸುಂದರರಾಜ್ ಅಯ್ಯಂಗಾರ್ ಅವರು ಕೋಲಾರ ಜಿಲ್ಲೆಯ ಬೆಳ್ಳೂರಿನಲ್ಲಿ 14ನೇ ಡಿಸೆಂಬರ್ 1918 ರಂದು ಜನಿಸಿದ್ದು, "ವಿಶ್ವವಿಖ್ಯಾತ ಯೋಗ ಗುರು" ಎಂದೇ ಖ್ಯಾತಿ ಪಡೆದಿದ್ದರು.

ಹೆಸರಾಂತ ಜನನಾಯಕ ಜಯಪ್ರಕಾಶ ನಾರಾಯಣ, ಖ್ಯಾತ ತತ್ವಜ್ಞಾನಿ ಜೆ. ಕೃಷ್ಣಮೂರ್ತಿ ಹಾಗೂ ವಿಶ್ವ ಪ್ರಸಿದ್ಧ ವಯೋಲಿನ್ ವಾದಕ ಯಹೂದಿ ಮೆನುಹಿನ್ ಸೇರಿ ಹಲವು ಖ್ಯಾತನಾಮರಿಗೆ ಯೋಗ ಕಲಿಸಿದ ಹೆಗ್ಗಳಿಕೆ ಇವರದಾಗಿತ್ತು.

1975ರಲ್ಲಿ 'ಯೋಗ ವಿದ್ಯಾ ಸಂಸ್ಥೆ' ಆರಂಭಿಸಿ ವಿಶ್ವಾದ್ಯಂತ ವಿಸ್ತರಿಸಿ 'ಆಧುನಿಕ ಋಷಿ' ಎಂದು ಹೆಸರುವಾಸಿಯಾಗಿದ್ದ ಅವರು ವಿವಿಧ ದೇಶಗಳಲ್ಲಿ 100ಕ್ಕೂ ಹೆಚ್ಚು ಯೋಗ ಶಾಲೆಗಳನ್ನು ತೆರೆದಿದ್ದು, ಯೋಗ ತಂತ್ರಗಳ ಕುರಿತು 14 ಪುಸ್ತಕಗಳನ್ನು ಬರೆದಿದ್ದು, ಅವರ ಪುಸ್ತಕಗಳು 17 ಭಾಷೆಗಳಿಗೆ ತರ್ಜುಮೆಗೊಂಡಿರುವುದು ಅವರ ಖ್ಯಾತಿಗೆ ಸಾಕ್ಷಿಯಾಗಿತ್ತು.

ಜಗತ್ತಿಗೆ ಯೋಗ ಪರಿಚಯಿಸುವಲ್ಲಿ ಪ್ರಮುಖರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅವರು ಪದ್ಮಶ್ರೀ, ಪದ್ಮಭೂಷಣ ಹಾಗೂ ಪದ್ಮವಿಭೂಷಣ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಬಿ.ಕೆ.ಎಸ್. ಅಯ್ಯಂಗಾರ್ ಅವರು ದಿನಾಂಕ 20.08.2014ರಂದು ನಿಧನ ಹೊಂದಿರುತ್ತಾರೆ.

ಮೃತರ ಗೌರವಾರ್ಥ ಸದಸ್ಯರುಗಳೆಲ್ಲರೂ ಒಂದು ನಿಮಿಷಗಳ ಕಾಲ ಎದ್ದು ನಿಂತು ಮೌನವನ್ನಾಚರಿಸಬೇಕು.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳೆಲ್ಲರೂ ಒಂದು ನಿಮಿಷಗಳ ಕಾಲ ಮೌನವನ್ನಾಚರಿಸಿದರು)

ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

ಈಗ ಪ್ರಶ್ನೋತ್ತರವನ್ನು ಪೂರೈಸಿಕೊಂಡುಬಿಡೋಣ.

2. ನಿಯಮ 60ರ ಅಡಿಯಲ್ಲಿ ಕಬ್ಬು ಬೆಳೆಗಾರರಿಗೆ ಪರಿಹಾರವನ್ನು ಕೊಡುವ ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಇವತ್ತು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ರೈತರ ಸಮಸ್ಯೆಗಳಿಗೆ ಪರಿಹಾರ ಕೊಡಲಿಕ್ಕೆ ಈ ಸರ್ಕಾರಕ್ಕೆ ಆಗಲಿಲ್ಲ. ಕಳೆದ ಸುವರ್ಣಸೌಧದ ಅಧಿವೇಶನದಲ್ಲಿ ಯಾವ ಕಬ್ಬಿನ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೆವು, ಆವತ್ತೇನು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು, 2650–00 ರೂಪಾಯಿಗಳನ್ನು ಕೊಡುವ ಬಗ್ಗೆ ಚರ್ಚೆಯಾಗಿತ್ತು.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಪಕ್ಷದ ಹಲವು ಮಾನ್ಯ ಸದಸ್ಯರು ಒಟ್ಟಿಗೆ ನಿಂತು ಮಾತನಾಡುತ್ತಿದ್ದರು)